# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಶ್ರೇಷ್ಠ ಕೃಷಿಕ

ಶ್ರೀ ಜಯದೇವ ಯಲ್ಲಪ್ಪ ಅಗಡಿ
ಸಾ: ಕುನ್ನೂರು ತಾ: ಶಿಗ್ಗಾಂವ ಜಿ: ಹಾವೇರಿ
ಫೋ : 9880044188



## ಕೃಷಿಯಲ್ಲಿ ಮಾಡಿದ ಆವಿಷ್ಕಾರ





ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಿಕೊಂಡು ಇತರರಿಗೆ ಮಾದರಿಯಾದ ರೈತರು ಬೆರಳೆಣಿಕೆಯಷ್ಟು ಮಾತ್ರ ಇಂತಹ ಮಾದರಿ ರೈತರಲ್ಲಿ ಒಬ್ಬರಾದ ಶಿಗ್ಗಾಂವ್ ತಾಲ್ಲೂಕಿನ ಕುನ್ನೂರು ಗ್ರಾಮದವರಾದ ಶ್ರೀ ಜಯದೇವ ಯಲ್ಲಪ್ಪ ಅಗಡಿಯವರು ತಮ್ಮ 25 ಎಕರೆ ಜಮೀನಿನಲ್ಲಿ ಕೃಷಿ ಬೆಳೆಗಳಾದ (ಗೋಡಂಬಿ, ಅಡಿಕೆ, ಮಾವು, ಬಾಳೆ, ತೆಂಗು), ಏಕ ಬೆಳೆಗಳನ್ನಾಗಿ ಮಾಡಿ ಮತ್ತು ಬಹುಬೆಳೆಗಳಾದ (ಕಾಳು ಮೆಣ ಸು, ಏಲಕ್ಕಿ) ಮತ್ತು ಅಂತರ ಬೆಳೆಗಳಾಗಿ ಶುಂಠಿ, ಅರಿಶಿಣ, ಸೋಯಾಬಿನ್, ಸುವರ್ಣಗಡ್ಡೆ ಮತ್ತು ಮಿಶ್ರ ಬೆಳೆಯಾಗಿ ಗೋವಿನ ಜೋಳ, ತೊಗರಿ ಇತ್ಯಾದಿ. ಇದರ ಜೊತೆಗೆ ಮನುಷ್ಯನಿಗೆ ಉಪಯೋಗವಾಗುವ ಆಯುರ್ವೇದಿಕ್ ಔಷಧಿ ಹಾಗೂ ಸಾಂಬಾರ ಗಿಡಗಳನ್ನು ಹಾಗೂ ಗೆಡ್ಡೆ ಗೆಣಸು ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.

ನೀರಿನ ಸದ್ಬಳಕೆಗಾಗಿ ಕೃಷಿ ಹೊಂಡ ಹಾಗೂ ಜವಳು ನಿರ್ವಹಣೆಯ ಸಮಗ್ರ ಪಕ್ಷಿ ನೋಟ ವ್ಯವಸ್ಥೆ ಹೊಂದಿದ್ದಾರೆ. ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುವ ಇವರು ಎರೆಹುಳು ಗೊಬ್ಬರ ಹಾಗೂ ಮೀನು ಸಾಕಾಣಿಕೆ ಸಹ ಮಾಡುತ್ತಿದ್ದಾರೆ. ನೀರಾವರಿ ವ್ಯವಸ್ಥೆ ಜೊತೆಗೆ ಜೀವಾಮೃತ ಸಹ ಬೆಳೆಗಳಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕೃಷಿಗೆ ಬೇಕಾದ ಯಂತ್ರೋಪಕರಣಗಳನ್ನು ಸಹ ಹೊಂದಿದ್ದಾರೆ. ವರ್ಷಕ್ಕೆ ಸುಮಾರು 15 ರಿಂದ 20 ಲಕ್ಷ ಆದಾಯ ಪಡೆಯುವವರಾಗಿದ್ದಾರೆ.

ಇವರ ಕೃಷಿ ಸೇವೆಯನ್ನು ಮೆಚ್ಚಿ ಅನೇಕ ಪ್ರಮಾಣ ಪತ್ರಗಳು ದೊರೆತಿವೆ. ಅವು "ಕೃಷಿ ಪಂಡಿತ ಪ್ರಶಸ್ತಿ ಮತ್ತು ಸನ್ಮಾನ ಪತ್ರ"ಕ್ಕೂ ಸಹ ಭಾಜನರಾಗಿದ್ದಾರೆ.